


ನಿಂತಿತು. ಬಳಿಕ ಅದು ಮುಕ್ತಾಯವಾದದ್ದು 1912ರ ಹೊತ್ತಿಗೆ. 180 ಮೀ. ಎತ್ತರ 91ಮೀ. ಅಗಲ ಹಾಗೂ 27 ಮೀ. ಆಳದ ಆ ಸಿಹಿನೀರಿನ ಸರೋವರದಿಂದ ಪೆರಿಯಕುಲಮ್ ನಗರಕ್ಕೆ ಕುಡಿಯುವ ನೀರಿನ ಯೋಜನೆ ಆರಂಭವಾಯಿತು.

1960ರಿಂದ ಬೆರಿಜಾಮ್ ಸರೋವರ ಅವಸಾನದತ್ತ ಸಾಗಿದೆ. ಸರೋವರದಲ್ಲಿ ಅಪಾರ ಪ್ರಮಾಣದ ಹೂಳು ತುಂಬಿಕೊಂಡಿದೆ. ಸುತ್ತಲಿನ 250 ಜಾತಿಯ ಕೋಲಾ ಸಸ್ಯಗಳು ಬಹುತೇಕ ನಾಶವಾಗಿದ್ದು ಕೇವಲ 70 ಜಾತಿಯ ಸಸ್ಯಗಳಷ್ಟೆ ಉಳಿದುಕೊಂಡಿವೆ. ಮುಂಗಾರು ಮಳೆಗಾಲದ ನಂತರ ಒಮ್ಮೊಮ್ಮೆ ಸರೋವರ ಬತ್ತಿ ಹೋಗುತ್ತದೆ. 2006ರ ಕೊಯಮತ್ತೂರಿನ 'ಸಲೀಂ ಅಲಿ ಪಕ್ಷಿ ಅಧ್ಯಯನ ಕೇಂದ್ರ'ದ ವರದಿಯ ಪ್ರಕಾರ, ಅಲ್ಲಿಯ ಪಕ್ಷಿಗಳು ನಿಧಾನವಾಗಿ ತಮ್ಮ ನೆಲೆಯನ್ನು ಕಳೆದುಕೊಳ್ಳುತ್ತಿವೆ. ಕೊಡೈಕನಾಲ್‌ನ ಪಾದರಸ ಕೈಗಾರಿಕೆಯಿಂದ ಹೊರಬಿದ್ದ ತ್ಯಾಜ್ಯ ಸರೋವರಕ್ಕೆ ಸೇರಿ ಸಿಹಿನೀರನ್ನು ವಿಷಮಯ ಮಾಡುವ ವಿಷಯವೂ ಆತಂಕ ತಂದಿದೆ. ಆದರೆ ತಮಿಳುನಾಡು ಸರ್ಕಾರ ಈ ಎಲ್ಲಾ ಸಮಸ್ಯೆಗಳಿಗೆ ಉತ್ತರ ಕಂಡುಕೊಂಡಿರುವುದು ಸಂತಸದ ವಿಷಯ.

ಸರ್ಪಹದ್ದು, ಕಡವೆ, ನೀಲಗಿರಿ ಮಂಗ, ಅಳಿಲು, ಕಾಡುಹಂದಿ ಮುಂತಾದ ಈ ಪರಿಸರದ ಪ್ರಾಣಿಗಳನ್ನು ರಕ್ಷಿಸಲು ಪ್ರಯತ್ನ ಸಾಗಿದೆ. 12 ವರ್ಷಕ್ಕೊಮ್ಮೆ ಅರಳುವ 'ನೀಲಕುರಿಂಜಿ'ಯಂತಹ ಅಪರೂಪದ ಸಸ್ಯ ಇಲ್ಲಿದೆ. ಅದನ್ನು ಉಳಿಸಲು ಅರಣ್ಯ ಇಲಾಖೆ 2.5 ಎಕರೆ ಜಾಗದಲ್ಲಿ ಔಷಧಿ ವನ ಸ್ಥಾಪಿಸಿದೆ. ಈ ಪರಿಸರದಲ್ಲಿ ಮಾನವನ ಓಡಾಟ, ಅತಿಕ್ರಮಣವನ್ನು ಸಂಪೂರ್ಣ ನಿಷೇಧಿಸಿದೆ. ಧೂಮಪಾನ, ಮದ್ಯಪಾನ, ಪ್ಲಾಸ್ಟಿಕ್ ಹರಡುವಿಕೆಗಳ ಮೇಲೆ ಇಲ್ಲಿ ಹತೋಟಿ ಸಾಧಿಸಿದೆ.

ಭಾರತದ ಮೊದಲ ಪರಿಸರ ಅಧ್ಯಯನ ಕೇಂದ್ರವೂ ಇಲ್ಲಿ ಸ್ಥಾಪನೆಯಾಗಿದ್ದು, ಯುವಕರಿಗೆ ತರಬೇತಿ, ಪ್ರಾತ್ಯಕ್ಷಿಕೆ ನೀಡುವ ಕೆಲಸ ಸಾಗಿದ್ದು, ಸಾರ್ವಜನಿಕರಿಗೂ ಪರಿಸರ ಸಂರಕ್ಷಣೆಯ ಬಗ್ಗೆ ತಿಳುವಳಿಕೆಯನ್ನು ಮೂಡಿಸುವ ಕೆಲಸ ನಡೆದಿದೆ. ಚಾರಣಪ್ರಿಯರಿಗೆ ಇದು ಅತ್ಯಂತ ಮುದನೀಡುವ ತಾಣ ಎನ್ನುವುದರಲ್ಲಿ ಅನುಮಾನವೇ ಇಲ್ಲ.

